ಲಕ್ಷಣವೇ. ಮಧು ವೈ.ಎನ್. ಅವರ 'ಚೀಟ್ ಶಿಟ್'ನಂಥ ಕಥೆಗಳನ್ನು ಗಮನಿಸಬಹುದು. ಇದರ ಸಂಗಡವೇ ಕನ್ನಡದ ಜೀವಗಳು ವಿದೇಶದಲ್ಲಿ ಬದುಕನ್ನು ರೂಪಿಸಿಕೊಳ್ಳುವ ಮುಕ್ತ ದಾರಿಯೊಂದು ತೆರೆದುಕೊಳ್ಳುತ್ತಿದೆ. ಐ.ಟಿ. ಜೀವನ ಮೇಲುನೋಟಕ್ಕೆ ಹಣದ ವಿಚಾರದಲ್ಲಿ ವಿಶಿಷ್ಟವೆನಿಸದರೂ, ಅಲ್ಲೊಂದು ಮಾನಸಿಕ ವಿಚ್ಛಿದ್ರತೆ ಎದ್ದುಕಾಣುತ್ತದೆ. ದಯಾನಂದರ 'ದೇವರು ಕಚ್ಚಿದ ಸೇಬು' ಕಥೆ ಈ ನೆಲೆಯಲ್ಲಿ ಕಾಣಬಹುದು. ಅನೇಕ ಕಥೆಗಾರ್ತಿಯರ ಕಥೆಗಳು ಇದೇ ಆಶಯವನ್ನು ಅಭಿವ್ಯಕ್ತಿಸುತ್ತವೆ.

ದಾದಾಪೀರ್, ಫಾತಿಮಾ, ಇಸ್ಮಾಯಿಲ್ ತಳಕಲ್ ಮತ್ತು ಮುನವ್ವರ್ ಜೋಗಿಬೆಟ್ಟು ಇವರು ಕೇವಲ ಧಾರ್ಮಿಕ ಕೇಂದ್ರಿತ ವಸ್ತುವನ್ನು ಆರಿಸಿಕೊಳ್ಳುತ್ತಿಲ್ಲ. ಈ ಕ್ರಮ ಹೊಸ ಕಥನಕ್ಕೆ ಪೂರಕವಾದದ್ದೇ. ಆದರೆ, ಸಮಕಾಲೀನ ವಿದ್ಯಮಾನಗಳು ಮತ್ತು ಕಥೆಯ ವಸ್ತು ಏಕೀಭವಿಸುವ ಸಂಭವ ಉಂಟಾದರೆ ಕಥೆಗಾರ ತನ್ನ ಸೃಜನಶೀಲತೆಯನ್ನು ಅಗ್ನಿಪರೀಕ್ಷೆಗೆ ಒಡ್ಡಬೇಕಾಗುತ್ತದೆ. ಈ ಮಾತು ದಲಿತ ಹಿನ್ನೆಲೆಯ ಲೇಖಕರಿಗೂ ಅನ್ವಯವಾಗುತ್ತದೆ. ಮುಸ್ಲಿಂ ಸಂವೇದನೆ ಎಂಬ ನುಡಿಗಟ್ಟು ಇಂದು ಬದಲಾಗುವ ಸೂಚನೆಗಳನ್ನು ಧರಿಸುತ್ತಿದೆ. ಆಧುನಿಕ ಬದುಕಿನ ಅರ್ಥಗಳು ಬದಲಾದರೂ, ಧರ್ಮದ ವಿಚಾರಗಳು ತಮ್ಮ ಮೊನಚನ್ನು ಕಳಚಿಲ್ಲ. ಸ್ವ ವಿಮರ್ಶೆ ಮತ್ತು ಬದುಕಿನ ಭಿನ್ನ ಆಯಾಮಗಳನ್ನು ಮೇಲಿನ ಲೇಖಕರು ಹುಡುಕುವ ಹಾದಿಯಲ್ಲಿದ್ದಾರೆ. ಆಗಲೇ ಹೇಳಿದ ಹಾಗೆ 'ಟೋಕನ್ ನಂಬರ್' ಕಥೆ ಇದಕ್ಕೆ ನಿದರ್ಶನ. ಅನುಕಂಪದ ಮೂಲಕ ಓದುಗನನ್ನು ಯಾಮಾರಿಸುವ ಗುಣದಿಂದ ಇವರು ಪಾರಾಗಿದ್ದಾರೆ. ತಳಕಲ್ ಅವರ 'ರೋಗಗ್ರಸ್ತ' ಕಥೆ ಹಲವು ಕಾರಣಗಳಿಗೆ ಮುಖ್ಯವಾದುದು. ಕಥೆಗೆ ಕೊರೊನಾ ಹಿನ್ನೆಲೆ ಇದ್ದರೂ, ಅಲ್ಲಿ ಮನುಷ್ಯನ ಮನಸ್ಸುಗಳು ಬೆತ್ತಲಾಗಿವೆ. ಈ ಬೆತ್ತಲುತನ ಮನುಷ್ಯರನ್ನು ವಿಚ್ಛಿದ್ರಗೊಳಿಸಿದೆ. ಕೂಡೊಟ್ಟಿನ ಬದುಕು ಕ್ರಮೇಣ ಅನುಮಾನಾಸ್ಪದವಾಗಿ ಕೊನೆಯಾಗುತ್ತದೆ. ಲೇಖಕನೊಬ್ಬ ಸ್ವಸವಾಲುಗಳನ್ನೂ ಮೀರಿ ಸುತ್ತಲ ಬದುಕನ್ನು ಗ್ರಹಿಸಬಲ್ಲ ಶಕ್ತಿ ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಬಯಲಲ್ಲಿ ತೇಲುತ್ತಿರುವ ಜನಪ್ರಿಯತೆಗೆ ಹತನಾಗಬಲ್ಲ. ಇದರಿಂದ ತಪ್ಪಿಸಿಕೊಳ್ಳಬೇಕೆಂದರೆ ಸೃಜನಶೀಲತೆಯಲ್ಲಿ ಪ್ರಾಮಾಣಿಕತೆ ಮತ್ತು ಆತ್ಮವಿಮರ್ಶೆ ಅನಿವಾರ್ಯ. ಮೇಲಿನವರು ಇದನ್ನು ಅರಿಯಬೇಕು. ತಳಕಲ್ ಕಥೆಯ ನೇಯ್ಗೆಯಲ್ಲಿ ಪಳಗುವಂತೆ ಕಂಡರೂ, ಸಾಕಷ್ಟು ಸಮಸ್ಯೆಗಳಿವೆ. ನಿರೂಪಣಾ ಕ್ರಮದಲ್ಲಿ ಮಾತುಗಾರಿಕೆ ಕಥೆಯ ಗಟ್ಟಿತನವನ್ನು ಕಸಿಯುತ್ತದೆ. ಇವರನ್ನು ಗೆಲ್ಲಿಸುವುದು 'ಗುಲಾಬಿ ಹೂವಿನ ಫ್ರಾಕು', 'ಜಸ್ಟೀಸ್ ಫಾರ್ ದುರಗಿ'ಯಂತ ಕಥೆಗಳೇ ಹೊರತು, 'ಬೆತ್ತಲೆ ಸಂತ' ಕಥೆಗಳಲ್ಲ. ಈ ಕಥೆಗೆ ಗಟ್ಟಿಯಾದ ಬದುಕಿನ ತಳಹದಿ ಇಲ್ಲ. ಕೇವಲ ಭಾಷೆಯ ಮೂಲಕ ಕೊಂಚ ಮುಂದೆ ಸಾಗಬಹುದಷ್ಟೇ. ನಿರ್ಲಿಪ್ತ ಸಾಧಕರು ನುಡಿಯ ಸೀಮೆಯನ್ನು ದಾಟಿದವರು. ಈ ಬಗೆಯ ವಸ್ತುವನ್ನು ಆರಿಸಿಕೊಳ್ಳುವಾಗ ಕೇವಲ ಕಿವಿ ಮಾತ್ರ ಎಚ್ಚರವಾಗಿದ್ದರೆ ಸಾಲದು. ಅನುಭವ ಕೈಹಿಡಿಯಬೇಕು. ಮೇಲಿನ ಲೇಖಕರಿಗೆ ಇರಬೇಕಾದ ಮತ್ತೊಂದು ಎಚ್ಚರವೆಂದರೆ, 'ಭಾವುಕತೆ' ಸಂಶಯದಲ್ಲಿ ಅಡಗಬಾರದು. ಮನುಷ್ಯತ್ವ ಮತ್ತು ಭಾವುಕತೆಗಳು ಹಲವು ಬಾರಿ ಮುಗ್ಧತೆಯಲ್ಲೇ ಅನಾವರಣವಾಗುತ್ತವೆ. ದಾದಾಪೀರ್ ಮತ್ತು ತಳಕಲ್ ಇದನ್ನು ಅರಿಯುವ ಹಾದಿಯಲ್ಲಿದ್ದಾರೆ. ದಾದಾಪೀರ್ 'ಗೇ' ಸಮಸ್ಯೆಗಳು ಮತ್ತು ಬದುಕನ್ನು ಅಭಿವ್ಯಕ್ತಿಸುತ್ತಿರುವುದು ವಸ್ತುವಿನ ವೈವಿಧ್ಯವನ್ನು ತೋರಿಸುತ್ತದೆ. ಆದರೆ ಈ ವಸ್ತು ವೈವಿಧ್ಯ ಅವರನ್ನು ಎಲ್ಲಿತನಕ ಕೊಂಡೊಯ್ಯಬಹುದೋ ಕಾದು ನೋಡಬೇಕು. ಜೋಗಿಬೆಟ್ಟು ಅವರು ಕೂಡ 'ಜಿನ್ನ್', 'ಅಪ್ಡೇಟ್', 'ಪರ್ಶಿಯನ್ ಕ್ಯಾಟ್' ಕಥೆಗಳಲ್ಲಿ ವಸ್ತುವಿನ ದೃಷ್ಟಿಯಿಂದ ಗಮನ ಸೆಳೆಯುತ್ತಾರೆ. ಮಸೀದಿಗಳ ಒಳಗು-ಹೊರಗುಗಳನ್ನು ಪ್ರಾಮಾಣಿಕತೆಯಿಂದ ಅಭಿವ್ಯಕ್ತಿಸುತ್ತಾರೆ. ಮಮ್ಮು, ಸಿದ್ದಿಬ್ಯಾರಿ, ಚಂದ್ರು ಮುಂತಾದವರ ಆತಂಕಗಳು ಬೇರೆ ತೆರನಾಗಿವೆ. ಮನುಷ್ಯನ ವಂಚಕ ಬುದ್ಧಿಗಳು ಧರ್ಮದ ಮೌಲ್ಯಗಳನ್ನು ಮುಳಗಿಸಬಲ್ಲವು. ಮಮ್ಮುಗೆ ತನ್ನ ಹೆಸರಿನ ಬೆನ್ನಲ್ಲಿ ಎದುರಾಗುವ ಸಮಸ್ಯೆಗಳು ದಂಗುಬಡಿಸುತ್ತವೆ. ಹೊಸಬಗೆಯ

